# ಮತ್ತೆ ಬಂದಿದೆ ಪ್ರಾಜೆಕ್ಟ್ ೫೬೦ | ನಿಮ್ಮ ಪಿನ್ ಕೋಡ್ ಏನು?

## ಪ್ರಾಜೆಕ್ಟ್ 560 : 2018

ಬೆಂಗಳೂರೆಂಬ ಬೆಂಗಳೂರೇ ಒಂದು ವೇದಿಕೆಯಾಗಿ... ಒಂದು ಕ್ಯಾನ್ವಾಸ್ ಆಗಿ... ಕಾಣುವುದೇ ಒಂದು ಸೋಜಿಗ! ಈ ನಗರದ ವಿಭಿನ್ನ ಧ್ವನಿಗಳು, ಅವಕಾಶಗಳು, ಇತಿಹಾಸಗಳು, ನೆನಪುಗಳು, ಒಲವುಗಳು ಈ ನಗರದ ಅಭಿವ್ಯಕ್ತಿಯಾಗುವುದು ಇನ್ನೂ ಸೋಜಿಗ. ಇಲ್ಲಿನ ಭೂತ, ವರ್ತಮಾನಗಳಿಂದ ಹೊಸ ಭವಿಷ್ಯದ ಕಲ್ಪನೆ ಸಾಕಾರಗೊಳ್ಳಲಿದೆ. ನಗರ ಎಂದರೆ ಯಾರು? ಒಬ್ಬ ನಿಜವಾದ ಬೆಂಗಳೂರಿಗ ಎಂದರೆ ಏನು? ಈ ನಗರದ ನಿಜವಾದ ಶಕ್ತಿ ಹಾಗೂ ಸವಾಲುಗಳೇನು? ಬೆಂಗಳೂರೆಂಬುದು ನಿಮ್ಮ ಮನಸಿನ ಒಂದು ಭಾಗವಾಗಿದ್ದರೆ ಪ್ರಾಜೆಕ್ಟ್ 560 ನಿಮಗಾಗಿ...

ಪ್ರಾಜೆಕ್ಟ್ 560 ದೀರ್ಘಕಾಲದವರೆಗೂ ಈ ನಗರದೊಂದಿಗೆ ಅನುದಾನ ಹಾಗೂ ಸಹಯೋಗಗಳ ಮೂಲಕ ಒಡನಾಡಲು ಕಂಕಣಬದ್ಧವಾಗಿದೆ.

**ಪ್ರಾಜೆಕ್ಟ್ 560 ಮೂಲಕ ಈ ಕೆಳಗಿನ ವಿಭಾಗಗಳಲ್ಲಿ ನೆರವು ಸಿಗಲಿದೆ.**

**ನೆರೆಹೊರೆಯ ಒಡನಾಟಗಳಿಗೆ ಬೆಂಬಲ** : ಸಮುದಾಯದ ಗುಂಪುಗಳಿಗೆ/ಸಂಸ್ಥೆಗಳಿಗೆ ತಮ್ಮ ನೆರೆಹೊರೆಯೊಂದಿಗೆ ಸಕ್ರಿಯ ಹಾಗೂ ಅರ್ಥಪೂರ್ಣ ಒಡನಾಟಗಳಿಗೆ ಅನುದಾನ ನೀಡುತ್ತೇವೆ. ಈ ಒಡನಾಟಗಳು ಕಥೆ ಹೇಳುವ ಚಟುವಟಿಕೆಗಳು, ಸಂಗೀತ, ಬೀದಿ ಪ್ರದರ್ಶನಗಳು, ತಾತ್ಕಾಲಿಕ ಅಥವಾ ಶಾಶ್ವತ ಇನಸ್ಟಲೇಷನ್‌ಗಳು... ಮುಂತಾದ ಕ್ರಿಯೆಗಳನ್ನು ಒಳಗೊಂಡಿರಬಹುದು. ಈ ಮೂಲಕ ನಾವು ನಮ್ಮ ನೆರೆಹೊರೆಯವರ ಕುರಿತು ಮತ್ತಷ್ಟು ಹಾಗೂ ಮತ್ತೊಮ್ಮೆ ಚಿಂತಿಸಲು ಸಾಧ್ಯವಾಗಬಹುದು. ಒಂದು ವರ್ಷದಲ್ಲಿ ಅಂತಹ ನಾಲ್ಕು ಒಡನಾಟಗಳಿಗೆ ಅನುದಾನ ಲಭ್ಯವಿದೆ. ಪ್ರತಿ ಒಡನಾಟಕ್ಕೆ ಗರಿಷ್ಠ ರೂ. 25,000 ಹಣ ಅನುದಾನವಿರುತ್ತದೆ. ಇದಕ್ಕಾಗಿ ಅರ್ಜಿಗಳನ್ನು ಜೂನ್ 2018 ರಿಂದ ಆಹ್ವಾನಿಸಲಾಗುತ್ತದೆ.

**ಸಂಸ್ಥೆಗಳಿಗೆ ಅನುದಾನ** : ಬೆಂಗಳೂರು ನಗರದ ಸಂಘ–ಸಂಸ್ಥೆಗಳಿಗೆ ಅನುದಾನ ಲಭ್ಯವಿದೆ. ನಗರದ ವಿವಿಧ ಕಲ್ಪನೆಗಳ ಬಗ್ಗೆ ನಮ್ಮಲ್ಲಿ ಹಲವು ಪ್ರಶ್ನೆಗಳನ್ನು ಮೂಡಿಸಬಲ್ಲ ಒಂದು ವರ್ಷ ಅವಧಿಯ ಯೋಜನೆಗಳನ್ನು ನಿರೀಕ್ಷಿಸುತ್ತೇವೆ. ಕಲಾ ಸಂಸ್ಥೆಗಳು ಅಥವಾ ಕಲೆಗೆ ಸಂಬಂಧಿಸಿಲ್ಲದ ಆದರೆ ಕಲಾತ್ಮಕ ಫಲಿತಾಂಶಗಳೆಡೆಗೆ ಕೆಲಸ ನಡೆಸಲು ಇಚ್ಛಿಸುವ ಸಂಸ್ಥೆಗಳು ಕೂಡ ಅರ್ಜಿ ಸಲ್ಲಿಸಬಹುದು. ಎರಡು ಸಂಸ್ಥೆಗಳಿಗೆ ಅನುದಾನ ನೀಡಲಾಗುವುದು. ವರ್ಷ ಅವಧಿಯ ಗರಿಷ್ಟ ಅನುದಾನ ಎಂಟು ಲಕ್ಷ ರೂಗಳಾಗಿರುತ್ತವೆ. ಇದಕ್ಕಾಗಿ ಅರ್ಜಿಗಳನ್ನು ಜುಲೈ 2018 ರಿಂದ ಆಹ್ವಾನಿಸಲಾಗುತ್ತದೆ.

**ವ್ಯಕ್ತಿಗಳಿಗೆ ಅನುದಾನ** : ಬೆಂಗಳೂರು ನಗರದದೊಂದಿಗೆ ಕ್ರಿಯಾಶೀಲವಾಗಿ ಸಂವಾದಿಸಬಲ್ಲ ಕಲಾವಿದರು ಹಾಗೂ ಸಂಶೋಧಕರಿಗೆ ಅನುದಾನ ಲಭ್ಯತೆ ಇದೆ. ಗತ, ವರ್ತಮಾನ ಅಥವಾ ಭವಿಷ್ಯದ ಹೊಳಹುಗಳೊಂದಿಗೆ ವಿಮರ್ಶಾತ್ಮಕವಾಗಿ ಶೋಧಿಸುವುದು ಅಗತ್ಯ. ನೀವು ಒಬ್ಬರು ಬರಹಗಾರ, ಕವಿ, ಪ್ರದರ್ಶನ ಕಲಾವಿದ, ದೃಶ್ಯ ಕಲಾವಿದ, ಚಿತ್ರ ತಯಾರಕ, ಡಿಜಿಟಲ್ ಕಲಾವಿದ ಆಗಿರಬಹುದು. ಕಲಾವಿದರೂ ಹಾಗೂ ಸಂಶೋಧಕರನ್ನೊಳಗೊಂಡ ಜಂಟಿ ಯೋಜನೆಗಳು ಸ್ವಾಗತಾರ್ಹ. ಅಭ್ಯರ್ಥಿಗಳು ದೇಶದ ಯಾವುದೇ ಭಾಗದವರಾಗಿರಬಹುದು. ಆದರೆ ಯೋಜನೆ ಕಾರ್ಯರೂಪಕ್ಕೆ ಬರಬೇಕಾದ್ದು ಬೆಂಗಳೂರಿನಲ್ಲಿ. ಗರಿಷ್ಟ ನಾಲ್ಕು ಲಕ್ಷದ ಪ್ರತಿ ಅನುದಾನ ಇರುತ್ತದೆ. ಮೂರು ವಯಕ್ತಿಕ ಯೋಜನೆಗಳಿಗೆ ಅವಕಾಶ ನೀಡಲಾಗುತ್ತದೆ. ಇದಕ್ಕಾಗಿ ಅರ್ಜಿಗಳನ್ನು ಆಗಸ್ಟ್ 2018 ರಿಂದ ಆಹ್ವಾನಿಸಲಾಗುತ್ತದೆ.

**ಪ್ರಾಜೆಕ್ಟ್ 560 ಹಬ್ಬ**

ಎರಡು ವರ್ಷಗಳ ಕೊನೆಯಲ್ಲಿ ಪ್ರಾಜೆಕ್ಟ್ 560 ಹಬ್ಬವನ್ನು ಹಮ್ಮಿಕೊಳ್ಳಲಾಗುವುದು. ಇದರ ನಿರ್ವಹಣೆಯನ್ನು ಐಎಫ್ಎ ನಡೆಸಲಿದ್ದು, ಈ ಹಬ್ಬದ ಭಾಗವಾಗಿ ವಸ್ತು ಪ್ರದರ್ಶನಗಳು, ಕಲಾ ಪ್ರದರ್ಶನಗಳು, ಚರ್ಚಾಗೋಷ್ಟಿಗಳು ನಡೆಯಲಿವೆ. ಅನುದಾನಿತ ಗುಂಪುಗಳು ಸಕ್ರಿಯವಾಗಿ ಈ ಹಬ್ಬದಲ್ಲಿ ಪಾಲ್ಗೊಳ್ಳುವವು. ಆ ಮೂಲಕ ನಗರದ ಬಹು ಆಯಾಮಗಳ ಚಿತ್ರಣವನ್ನು ಕಟ್ಟಿಕೊಡಲು ಪ್ರಯತ್ನಿಸಲಾಗುವುದು.

**ನಿಮ್ಮ ಪಿನ್ ಕೋಡ್ ಏನು?**

ಪ್ರಾಜೆಕ್ಟ್ ೫೬೦ ಕುರಿತು ಹೆಚ್ಚಿನ ಮಾಹಿತಿಗಾಗಿ ಸುಮನಾ ಚಂದ್ರಶೇಖರ್ ಅವರನ್ನು sumana@indiaifa.org ಈ ಮೇಲ್ ಐಡಿ ಯಲ್ಲಿ ಸಂಪರ್ಕಿಸಿ ಅಥವಾ 080-23414681 / 82 ಗೆ ಕರೆ ಮಾಡಿ.

**ಈ ವರ್ಷ ಪ್ರಾಜೆಕ್ಟ್ ೫೬೦ ಸಿಟಿ ಇಂಡಿಯಾದ ಸಹಯೋಗದೊಂದಿಗೆ ನಡೆಯುತ್ತಿದೆ.**

citi